## ನಿಮ್ಮೊಡನೆ

# ಸಾಮಾಜಿಕ ವೈರಸ್‌ಗೆ ಮದ್ದು ದೊರೆಯುವುದು ಯಾವಾಗ?

**ಕೊರೋನಾ ವೈರಸ್‌ಗೆ ಕೆಲವು ಜೀವಗಳು ಬಲಿಯಾದಾಗ ಇಡೀ ಸಮಾಜವೇ ಗಾಬರಿಬೀಳುತ್ತದೆ. ಸಾರ್ವಜನಿಕರ ಆರೋಗ್ಯದ ರಕ್ಷಣೆಗೆ ಸರ್ಕಾರ ಟೊಂಕ ಕಟ್ಟಿ ನಿಲ್ಲುತ್ತದೆ. ಇದು ಸ್ವಾಗತಾರ್ಹ. ಆದರೆ, ಇದೇ ಉಮೇದು, ಇಚ್ಛಾಶಕ್ತಿ ಹಾಗೂ ಕಾಳಜಿ, ಜಾತೀಯತೆ, ಕಂದಾಚಾರ, ಮೂಢನಂಬಿಕೆಗಳಂತಹ ಸಾಮಾಜಿಕ ವೈರಸ್‌ಗಳನ್ನು ನಾಶಪಡಿಸುವ ನಿಟ್ಟಿನಲ್ಲಿ ಯಾಕೆ ವ್ಯಕ್ತವಾಗುವುದಿಲ್ಲ?**

ಕೊರೊನಾ ವೈರಾಣುವಿನ ಭೀತಿಯಿಂದಾಗಿ ರಾಜ್ಯದಲ್ಲಿ 'ಆರೋಗ್ಯ ತುರ್ತು ಪರಿಸ್ಥಿತಿ' ಜಾರಿಯಲ್ಲಿದೆ. ಶಾಲಾ ಕಾಲೇಜುಗಳಿಗೆ ರಜೆ ಘೋಷಿಸಲಾಗಿದೆ. ಜಾತ್ರೆ, ಸಂತೆ, ಕ್ರೀಡಾಕೂಟಗಳು, ಸಂತೋಷಕೂಟಗಳು, ಹೆಚ್ಚು ಜನ ಸೇರುವ ಸಮಾರಂಭಗಳನ್ನು ನಿಷೇಧಿಸಲಾಗಿದೆ. ಮಾರಣಾಂತಿಕ ಸಾಂಕ್ರಾಮಿಕ ರೋಗವನ್ನು ಹತೋಟಿಗೆ ತರುವ ನಿಟ್ಟಿನಲ್ಲಿ ಇಂಥ ಮುಂಜಾಗರೂಕತೆ ಅತ್ಯಗತ್ಯ. ಈ ನಿಟ್ಟಿನಲ್ಲಿ ಸರ್ಕಾರದ ಪ್ರಯತ್ನಗಳೊಂದಿಗೆ ಸಾರ್ವಜನಿಕರೂ ಕೈಗೂಡಿಸಬೇಕು. ಸಾಮೂಹಿಕ ಪ್ರಯತ್ನದಿಂದಷ್ಟೇ ಕೊರೊನಾ ವೈರಾಣು ಪ್ರಸರಣವನ್ನು ತಹಬಂದಿಗೆ ತರುವುದು ಸಾಧ್ಯ.

ವೈಯಕ್ತಿಕ ಸ್ವಚ್ಛತೆಯ ಜೊತೆಗೆ ಸಾಮಾಜಿಕ ಸ್ವಾಸ್ಥ್ಯ ಈ ಹೊತ್ತಿನ ಅಗತ್ಯ. ಕೈಬಾಯಿ ಮಾತ್ರವಲ್ಲ, ನಾಲಗೆಯನ್ನೂ ಶುಚಿಯಾಗಿಟ್ಟುಕೊಳ್ಳಬೇಕು; ವದಂತಿಗಳನ್ನು ಹರಡುವ ಮೂಲಕ ಸಮಾಜದಲ್ಲಿ ಭೀತಿಯುಂಟು ಮಾಡುವ ಕೆಲಸವನ್ನು ಯಾರೂ ಮಾಡಬಾರದು. ಕೊರೊನಾ ವೈರಾಣು ಕರ್ನಾಟಕದಲ್ಲಿ ಮಾತ್ರವಲ್ಲ, ವಿಶ್ವದಲ್ಲೇ ತುರ್ತು ಪರಿಸ್ಥಿತಿಯಂತಹ ಸಂದರ್ಭವನ್ನು ಸೃಷ್ಟಿಸಿದೆ. ಸುಸಜ್ಜಿತ ಆರೋಗ್ಯ ಸವಲತ್ತುಗಳನ್ನು ಹೊಂದಿರುವ ಅಮೆರಿಕ, ಇಂಗ್ಲೆಂಡ್, ಇಟಲಿಗಳಂತಹ ದೇಶಗಳೇ ತಲ್ಲಣಗೊಂಡಿವೆ. ಈ ವೈರಾಣು ಮೊದಲಿಗೆ ಕಾಣಿಸಿಕೊಂಡ ಚೀನಾದಲ್ಲಿ ಮರಣ ಮೃದಂಗ ಅನುರಣಿಸಿ, ಪ್ರಸ್ತುತ ಆ ದೇಶ ಮರುಹುಟ್ಟು ಪಡೆದಂತೆ ಸಹಜಲಯ ಕಂಡುಕೊಳ್ಳುವ ಪ್ರಯತ್ನದಲ್ಲಿದೆ. ಹೀಗೆ ಇಡೀ ವಿಶ್ವವನ್ನೇ ಕಂಗೆಡಿಸಿರುವ ವೈರಾಣುವಿನಿಂದಾಗಿ ನಮಗೆಲ್ಲ ಮರೆತುಹೋದ ಸಂಗತಿಯೊಂದು ಮತ್ತೆ ನೆನಪಾಗಿದೆ. ಅದು, ನಾವೆಲ್ಲರೂ ಒಂದು ಎನ್ನುವ ಸಂಗತಿ. ಸಾವಿನ ಆತಂಕದ ಸವಾಲುಗಳು ಇತಿಹಾಸದುದ್ದಕ್ಕೂ ಜಾತಿ–ಧರ್ಮಗಳನ್ನು ಮೀರಿ ಮನುಷ್ಯರನ್ನು ಒಗ್ಗೂಡಿಸಿವೆ. ಪ್ರಸಕ್ತ ಕೊರೊನಾ ಕೂಡ ನಾವೇ ಸೃಷ್ಟಿಸಿಕೊಂಡ ಬಿಕ್ಕಟ್ಟುಗಳನ್ನು ಸ್ವಲ್ಪ ಕಾಲವಾದರೂ ಮರೆಸಿ, ಸರ್ವರ ಹಿತದ ಬಗ್ಗೆ ಚಿಂತಿಸಲು ಅವಕಾಶ ಕಲ್ಪಿಸಿದೆ. ವೈರಾಣುವನ್ನು ನಿಯಂತ್ರಿಸುವುದು ಮಾತ್ರವಲ್ಲ, ನಮ್ಮ ಮನಸ್ಸಿನೊಳಗೆ ನಾವೇ ಸೃಷ್ಟಿಸಿಕೊಂಡ ವೈರಸ್‌ಗಳನ್ನು ನಾಶಪಡಿಸಲು ಕೂಡ ಇದು ಸಕಾಲ.

ಕೊರೊನಾ ವೈರಾಣು ಭಯ ಸೃಷ್ಟಿಸಿರುವ ಸಂದರ್ಭದಲ್ಲೇ ರಾಜ್ಯದ ಹಲವು ಜಿಲ್ಲೆಗಳಲ್ಲಿ ಅಸ್ಪೃಶ್ಯತೆ ಎನ್ನುವ ಸಾಮಾಜಿಕ ವೈರಸ್ ಜೀವಂತವಾಗಿದೆ ಎನ್ನುವ ವಾಸ್ತವ ಬೆಚ್ಚಿಬೀಳಿಸುವಂತಿದೆ. ನಾಡಿನ ಅನೇಕ ಭಾಗಗಳಲ್ಲಿ ಈಗಲೂ ದಲಿತರ ಪಾಲಿಗೆ ದೇವಸ್ಥಾನ, ಹೋಟೆಲ್, ಕ್ಷೌರದಂಗಡಿಗಳ ಬಾಗಿಲು ಮುಚ್ಚಿರುವುದು ಜಾತೀಯ ವೈರಸ್ ಬಲಿತುಕೊಂಡಿರುವುದಕ್ಕೆ ಉದಾಹರಣೆಯಾಗಿದೆ. ದಲಿತರು ಸತ್ತರೆ ಶವಸಂಸ್ಕಾರಕ್ಕೂ ಜಾಗವಿಲ್ಲದೆ ಪರದಾಡುವ ಸ್ಥಿತಿ ಅನೇಕ ಕಡೆಗಳಲ್ಲಿದೆ. ಕುಡಿಯುವ ನೀರನ್ನು ಪಡೆಯಲು ಜಾತಿ ಅಡ್ಡವಾಗಿ ಪರಿಣಮಿಸಿದೆ. ಸಾಮೂಹಿಕ ವಿವಾಹ ಕಾರ್ಯಕ್ರಮಗಳಲ್ಲಿ ಜಾತೀಯ ಮನಸ್ಸುಗಳು ಕೆಲಸ ಮಾಡುತ್ತಿವೆ. ಜಾತೀಯ ಮನಃಸ್ಥಿತಿ ಸಮಾಜದೊಳಗೆ ಹಲವು ರೂಪಗಳಲ್ಲಿ ಜೀವಂತವಾಗಿರುವುದು ಹಾಗೂ ಆ ಪರಿಸ್ಥಿತಿಯನ್ನು ದಲಿತರು ಅನಿವಾರ್ಯವಾಗಿ ಒಪ್ಪಿಕೊಂಡಿರುವುದು ಆಘಾತಕಾರಿ. ಈ ಸಮಸ್ಯೆಗಳೆಲ್ಲವನ್ನೂ ಪರಿಹರಿಸಿ, ಸಮಾನತೆಯನ್ನು ಸೃಷ್ಟಿಸಬೇಕಾದ ಸರ್ಕಾರ ಜಾತೀಯತೆಗೆ ಮೂಕಪ್ರೇಕ್ಷಕನಾಗಿದೆ.

ಕೊರೊನಾ ವೈರಸ್‌ಗೆ ಕೆಲವು ಜೀವಗಳು ಬಲಿಯಾದಾಗ ಇಡೀ ಸಮಾಜವೇ ಗಾಬರಿಬೀಳುತ್ತದೆ. ಸಾರ್ವಜನಿಕರ ಆರೋಗ್ಯದ ರಕ್ಷಣೆಗೆ ಸರ್ಕಾರ ಟೊಂಕ ಕಟ್ಟಿ ನಿಲ್ಲುತ್ತದೆ. ಇದು ಸ್ವಾಗತಾರ್ಹ. ಆದರೆ, ಇದೇ ಉಮೇದು, ಇಚ್ಛಾಶಕ್ತಿ ಹಾಗೂ ಕಾಳಜಿ, ಜಾತೀಯತೆ, ಕಂದಾಚಾರ, ಮೂಢನಂಬಿಕೆಗಳಂತಹ ಸಾಮಾಜಿಕ ವೈರಸ್‌ಗಳನ್ನು ನಾಶಪಡಿಸುವ ನಿಟ್ಟಿನಲ್ಲಿ ಯಾಕೆ ವ್ಯಕ್ತವಾಗುವುದಿಲ್ಲ? ಸ್ವಾತಂತ್ರ್ಯಾನಂತರ ಏಳು ದಶಕಗಳ ನಂತರವೂ ಅಸ್ಪೃಶ್ಯತೆಯನ್ನು ನಾಶಪಡಿಸುವುದು ಸಾಧ್ಯವಾಗಿಲ್ಲ ಎನ್ನುವುದಾದರೆ, ಅದು ನಮಗೆ ಬೇಕಾಗಿದೆಯೇ ಹಾಗೂ ಅದನ್ನು ನಮ್ಮ ಸರ್ಕಾರ ಹಾಗೂ ಸಾಮಾಜಿಕ ವ್ಯವಸ್ಥೆ ಪೋಷಿಸುತ್ತಿವೆಯೇ? ಜಾತೀಯತೆ ಮತ್ತು ಅಸ್ಪೃಶ್ಯತೆ ನಾಗರಿಕ ಜಗತ್ತಿಗೇಕೆ ನಾಚಿಕೆಗೇಡು ಅನ್ನಿಸುತ್ತಿಲ್ಲ? ಸಹಜವಾಗಿಯೇ ಉದ್ಭವಿಸುವ ಇಂಥ ಪ್ರಶ್ನೆಗಳನ್ನು ಪ್ರಜ್ಞಾವಂತ ಸಮಾಜ ಮತ್ತೆ ಮತ್ತೆ ಚರ್ಚೆಗೆತ್ತಿಕೊಂಡು ಪರಿಹಾರದ ದಾರಿಗಳನ್ನು ಕಂಡುಕೊಳ್ಳಬೇಕಾಗಿದೆ. ಜೀತಪದ್ಧತಿ ಆಧುನಿಕ ಸ್ವರೂಪ ಪಡೆದುಕೊಂಡು ಬೆಂಗಳೂರು ಮಹಾನಗರದ ಆಸುಪಾಸಿನಲ್ಲೇ ಜಾರಿಯಲ್ಲಿರುವುದು ಕೆಲವು ದಿನಗಳ ಹಿಂದಷ್ಟೇ ವರದಿಯಾಗಿದ್ದುದನ್ನೂ ಈ ಸಂದರ್ಭದಲ್ಲಿ ನೆನಪಿಸಿಕೊಳ್ಳಬೇಕು. ಮಾರಣಾಂತಿಕ ವೈರಾಣುಗಳು ಒಂದಷ್ಟು ಸಾವಿರ ಜನರನ್ನು ಬಲಿತೆಗೆದುಕೊಳ್ಳಬಹುದು. ಕ್ರಾಲಕ್ರಮೇಣ ಆ ವೈರಸ್‌ಗಳು ಕೂಡ ಮನುಷ್ಯನ ದೇಹಕ್ಕೆ ಒಗ್ಗಿಹೋಗುತ್ತವೆ, ನಿರಪಾಯವಾಗಿ ಪರಿಣಮಿಸುತ್ತವೆ. ಕೆಲವು ವೈರಸ್‌ಗಳಿಗೆ ಲಸಿಕೆಯನ್ನೂ ಕಂಡುಕೊಳ್ಳಬಹುದು. ದುರದೃಷ್ಟವೆಂದರೆ, ಜಾತೀಯತೆಯ ವೈರಾಣುವಿಗೆ ಈವರೆಗೂ ಲಸಿಕೆ ಕಂಡುಕೊಳ್ಳಲಾಗಿಲ್ಲ; ಶತಮಾನಗಳ ನಂತರವೂ ಆ ವೈರಸ್ ಅಪಾಯಕಾರಿಯಾಗಿಯೇ ಮುಂದುವರೆದಿದೆ. ಅದನ್ನು ನಾಶಪಡಿಸಲು ಇನ್ನೆಷ್ಟು ಕಾಲ ಬೇಕೊ?

■ **ರಘುನಾಥ ಚ.ಹ.**



ಈಶ್ವರ್